ಇ) ಜಿಲ್ಲೆಯ ಎಷ್ಟು ಹಳ್ಳಿಗಳು ಈ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿವೆ ಹಾಗೂ ಇವು ಯಾವುವು?

ಶ್ರೀ ಎಸ್. ಬಂಗಾರಪ್ಪ, (ಮಾನ್ಯ ಮುಖ್ಯ ಮಂತ್ರಿಗಳು):–

ಅ) ದಿ: 4–5–90 ಮತ್ತು 20–7–90 ರಂದು 2 ಬಾರಿ ಪುನರ್ವಸತಿ ಸಭೆಗಳು ನಡೆದಿವೆ.

ಆ) ಈ ಯೋಜನೆಯಿಂದ ನಿರಾಶ್ರಿತರಾದ ಜನರ ಪುನರ್ವಸತಿಗಾಗಿ ರಸ್ತೆ, ವಿದ್ಯುಚ್ಛಕ್ತಿ, ನೀರು, ಪ್ರಾಥಮಿಕ ಶಾಲೆ, ಆರೋಗ್ಯ ಕೇಂದ್ರ, ಪಶುಚಿಕಿತ್ಸಾ ಕೇಂದ್ರ, ಮಾರುಕಟ್ಟೆ ಸಂಕೀರ್ಣ, ಸಮುದಾಯ ಭವನ, ಬಾಲವಾಡಿ ಕೇಂದ್ರ ಮತ್ತು ದೇವಸ್ಥಾನಗಳನ್ನು ನಿರ್ಮಿಸಲು ಸರ್ಕಾರವು ಕಾರ್ಯಕ್ರಮಗಳನ್ನು ರೂಪಿಸಿದೆ. ಇದುವರೆವಿಗೆ ಒಟ್ಟು 207 ಜನ ನಿರಾಶ್ರಿತರಿಗೆ (ಅಮರಳ್ಳಿ 144, ಬಿಣಗಾ 63) ಪುನರ್ವಸತಿಯನ್ನು ಕಲ್ಪಿಸಲಾಗಿದೆ.

ಇ) ಈ ಯೋಜನೆಯ ವ್ಯಾಪ್ತಿಗೆ ಒಟ್ಟು 13 ಹಳ್ಳಿಗಳು ಒಳಪಟ್ಟಿವೆ. ಅವುಗಳು, ಬಿಣಗಾ, ಅರಗಾ, ಚಿಂಡಿಯಾ, ಕೋಡಾರ, ತೋಡೂರ ಅಮದಳ್ಳಿ, ಭಾವಿಕೇರಿ, ಜೆಲೇಕೇರಿ, ಹಟ್ಟಿಕೇರಿ, ಅಲಗೇರಿ, ಹಾರಾವಾಡ, ನೆಲ್ಲೂರು ಕಂಚಿನ ಬೈಲು ಮತ್ತು ಜೆರಡೆ.

ರಾಜ್ಯದಲ್ಲಿ ಸಾಲ ಮನ್ನಾ ಬಗ್ಗೆ

530 ಶ್ರೀ ಎಂ.ವಿ. ವೆಂಕಟಪ್ಪ (ಮುಳುಬಾಗಿಲು):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರ ಸಾಲವನ್ನು ಮನ್ನಾ ಮಾಡಿದಲ್ಲಿ ಒಟ್ಟು ಎಷ್ಟು ಕೋಟಿ ರೂಪಾಯಿಗಳು ಮನ್ನಾ ಮಾಡುವ ಸಂಭವವಿದೆ?

ಆ) ಯಾವ ತಾರೀಕಿನಿಂದ ಯಾವ ತಾರೀಕಿನವರೆಗೆ ಸಾಲ ಮನ್ನಾ ಪಡೆಯಲು ಅರ್ಹರಾಗುತ್ತಾರೆ. ಸಾಲ ಮನ್ನಾ ಪಡೆಯಲು ಇರಬೇಕಾಗಿರುವ ಅರ್ಹತೆಗಳೇನು?

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು):–

ಅ) ರೂ. 131.53 ಕೋಟಿ.

ಆ) ಮನ್ನಾಗೆ ಅರ್ಹವಾಗಿರುವ ಸಾಲ 2.10.89ಕ್ಕೆ ಸುಸ್ತಿಯಾಗಿರಬೇಕು.

ಸಾಲ ಮನ್ನಾ ಪಡೆಯಲು ಕೆಳಕಂಡ ಅರ್ಹತೆಗಳು ಇರಬೇಕು:

1) ಸಾಲ 2–10–1989ಕ್ಕೆ ಸುಸ್ತಿಯಾಗಿರಬೇಕು;
2) ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕಿನಿಂದ ಸಾಲ ಪಡೆದಿರಬೇಕು;
3) ಸುಸ್ತಿ ಸಾಲವು ಉದ್ದೇಶಪೂರ್ವಕವಾಗಿರಬಾರದು;
4) ಕಾಲಾನುಕ್ರಮದಿಂದ ಸುಸ್ತಿಯಾಗಿರುವ ಸಾಲ ಮೂರು ವರ್ಷ ಮೇಲ್ಪಟ್ಟಿರಬೇಕು;
5) 2–10–1989ಕ್ಕೆ ಅಥವಾ ಅದಕ್ಕಿಂತಲೂ ಮುಂಚಿತ ಮೃತಹೊಂದಿದವರ ಸಾಲ;
6) 2–10–1989ಕ್ಕೆ ಅಥವಾ ಅದಕ್ಕಿಂತಲೂ ಮುಂಚಿತ ದಿವಾಳಿಯೆಂದು ಘೋಷಿಸಲ್ಪಟ್ಟಿರುವ ಹಾಗೂ ಘೋಷಿಸಲು ಬಾಕಿ ಇರುವ ಸಾಲ.
7) ಸಾಲದ ಸುಸ್ತಿ ಅವಧಿಯಲ್ಲಿ ಎರಡು ವರ್ಷಗಳು ಕೆಟ್ಟು ಬೆಳೆಯೆಂದು ಘೋಷಿಸಲ್ಪಟ್ಟಿರಬೇಕು (ಅಣೇವಾರಿ)
8) ಅರ್ಹ ಸಾಲದಲ್ಲಿ ಕೇವಲ ರೂ. 10,000–00 ಮನ್ನಾ ಮಾಡಲಾಗುವುದು.

ಹುಬ್ಬಳ್ಳಿ ವಿಮಾನ ನಿಲ್ದಾಣದ ಬಗ್ಗೆ

343 ಶ್ರೀ ಶಿವಾನಂದ ಎಚ್ ಕೌಜಲಗಿ (ಬೈಲಹೊಂಗಲ):– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೋಸ್ಕರ ರಾಜ್ಯ ಸರ್ಕಾರದವರು ಎಷ್ಟು ಹಣ ಒದಗಿಸಿರುವರು ಮತ್ತು ಯಾವ ಯಾವ ಅನುಕೂಲತೆಗಳನ್ನು ಮಾಡಿಕೊಟ್ಟಿರುವರು;